Reg. No. | | | | | | | | | |

**BCMKAL 253**

## ಗುಣಾಂಕ ಆಧಾರಿತ ನಾಲ್ಕನೇಯ ಸೆಮಿಸ್ಟರ್ ಬಿ.ಕಾಂ. ಪದವಿ ಪರೀಕ್ಷೆ, ಮೇ/ಜೂನ್ 2016
## (2014 – 15 ಮತ್ತು ನಂತರದ ಸಾಲಿನವರಿಗೆ)
## (ಕನ್ನಡ ಭಾಷಾ ಪತ್ರಿಕೆ)

ಸಮಯ : 3 ಗಂಟೆಗಳು ಗರಿಷ್ಠ ಅಂಕಗಳು : 80

### ಭಾಗ – 1 (ಕಾವ್ಯ)

I. ಅ) ಕೆಳಗಿನ ಪ್ರಶ್ನೆಗಳಲ್ಲಿ **ಒಂದಕ್ಕೆ** ವಿವರವಾಗಿ ಉತ್ತರಿಸಿರಿ. **(1×8=8)**

1) ಅವಳಿ ಮಕ್ಕಳ ಧೈರ್ಯ ಹಾಗೂ ಆಧ್ಯಾತ್ಮಿಕ ಗಟ್ಟಿತನದಿಂದಾಗಿ ಮಾರಿದತ್ತನ ಮನಸ್ಸು ಬದಲಾದ ಸಂದರ್ಭವನ್ನು ವಿವರಿಸಿರಿ.

2) ಬ್ರಿಟಿಷರ ವಿರುದ್ಧ ಪ್ರತಿಭಟಿಸಿದ ಮೊದಲ ಮಹಿಳೆ ಕಿತ್ತೂರು ಚೆನ್ನಮ್ಮನನ್ನು ಲಾವಣಿಯ ಹಿನ್ನಲೆಯಲ್ಲಿ ವಿವರಿಸಿರಿ.

ಆ) ಕೆಳಗಿನ ಪ್ರಶ್ನೆಗಳಲ್ಲಿ **ಒಂದಕ್ಕೆ** ಸಂಕ್ಷಿಪ್ತವಾಗಿ ಉತ್ತರಿಸಿರಿ. **(1×6=6)**

1) ಬದುಕಿನ ಹೊಸ ಸಾಧ್ಯತೆಗಳ ಕುರಿತು ಚಿಂತಿಸಲು 'ನಡೆಯಬೇಕು' ಕವನ ಹೇಗೆ ಪ್ರೇರಣೆಯಾಗುತ್ತದೆ ?

2) ಗಾಂಧೀಜಿಯವರ ಅಸಾಧಾರಣ ವ್ಯಕ್ತಿತ್ವವನ್ನು ಕವನ ಹೇಗೆ ಅನಾವರಣ ಮಾಡಿದೆ ?

ಇ) **ಒಂದಕ್ಕೆ** ಟಿಪ್ಪಣಿ ಬರೆಯಿರಿ. **(1×4=4)**

1) ಭಾಮಿಯಾನದ ಬುದ್ಧ

2) ಕನಕದಾಸ.

II. ಅ) **ಒಂದು** ಪದ್ಯಭಾಗದ ಸಂದರ್ಭವನ್ನು ಸೂಚಿಸಿ ಸ್ವಾರಸ್ಯವನ್ನು ವಿವರಿಸಿರಿ. **(1×5=5)**

1) ಬಾಂಧವರೊಡನೆ ಕದನ ಬೇಡವೆಂದು ಮ
ದಾಂಧ ಕೌರವಗೆ ಬುದ್ಧಿಯನು
ಗಾಂಧಾರಿ ಪೇಳೆ ಕೇಳದೆ ಕೆಟ್ಟನವನದ
ನೇಂ ಧರೆಯರಿಯದೆ ರಾಮ

P.T.O.

2) ಸ್ವರ್ಗಕ್ಕೂ ಮಿಗಿಲಾದದ್ದು ನಿಸರ್ಗ
ಎಂದವನು ಬುದ್ಧ
ಶಿಲೆಯಲ್ಲಿ, ಪಾವಕದಲ್ಲಿ
ಹಿಮದಲ್ಲೂ, ನಾದದಲ್ಲೂ ಇರಬಲ್ಲಾತ
ಅರಿತವರ ನಗೆಯಲ್ಲೂ
ಅರಿಯದವರ ಅಳುವಿನಲ್ಲೂ.

ಆ) ಕೆಳಗಿನ ವಾಕ್ಯಗಳಲ್ಲಿ **ಎರಡರ** ಸಂದರ್ಭವನ್ನು ಸೂಚಿಸಿ ಸ್ವಾರಸ್ಯವನ್ನು ವಿವರಿಸಿರಿ. **(2×4=8)**

1) ಭಕ್ತರಿಗೆ ಕುಲವಾವುದಯ್ಯಾ
2) ವೇಷಾಧಾರಿಗಳು ಸನ್ಯಾಸಿಗಳು ಅಹುದೆ ?
3) ರಾಯಣ್ಣ ತಂದು ಶೂಲಕ ಹಾಕ್ಯಾರೋ

ಇ) ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ. **(1×4=4)**

1) ಕನಕದಾಸರ ಅಂಕಿತ ಯಾವುದು ?
2) ಅಯೋಧ್ಯಾದೇಶದ ರಾಜಧಾನಿ ಯಾವುದು ?
3) ನಂಜುಂಡ ಕವಿಯ ಸಾಂಗತ್ಯ ಕೃತಿಯ ಹೆಸರೇನು ?
4) ಕುವೆಂಪು ಅವರು ಬರೆದ ಮೊದಲ ಇಂಗ್ಲೀಷ್ ಕವನ ಸಂಕಲನದ ಹೆಸರೇನು ?

## ಭಾಗ – 2 (ಮಹಾಕಾವ್ಯ)

III. ಅ) ಕೆಳಗಿನ ಪ್ರಶ್ನೆಗಳಲ್ಲಿ **ಒಂದಕ್ಕೆ** ಉತ್ತರಿಸಿರಿ. **(1×8=8)**

1) ಉದಯನನು ಗೌತಮನನ್ನು ಲೌಕಿಕ ಜೀವನದೆಡೆಗೆ ಆಕರ್ಷಿಸಲು ಮಾಡಿದ ಪ್ರಯತ್ನ, ಅದಕ್ಕೆ ಗೌತಮನ ಪ್ರತಿಕ್ರಿಯೆ ಹೇಗೆ ವ್ಯಕ್ತವಾಗಿದೆ ?
2) ಶ್ರೀಮಂತನಾದ ಯಶಸ್ ಭೋಗ ವಿಮುಖನಾದ ಸನ್ನಿವೇಶವನ್ನು ಚಿತ್ರಿಸಿ.

ಆ) ಕೆಳಗಿನ ಪ್ರಶ್ನೆಗಳಲ್ಲಿ **ಒಂದಕ್ಕೆ** ಸಂಕ್ಷಿಪ್ತವಾಗಿ ಉತ್ತರಿಸಿರಿ. **(1×5=5)**

1) ಚೆನ್ನನ ಪಾತ್ರವನ್ನು ಚಿತ್ರಿಸಿರಿ.
2) ಗೌತಮ ಪರಿವ್ರಾಜಕನಾಗಲು ಹೊರಟಾಗ ತಂದೆ, ತಾಯಿ, ಯಶೋಧರೆಯರ ಪ್ರತಿಕ್ರಿಯೆಗಳನ್ನು ಚಿತ್ರಿಸಿರಿ.

ಇ) ಕೆಳಗಿನ ಪ್ರಶ್ನೆಗಳಲ್ಲಿ ಪ್ರತಿಯೊಂದಕ್ಕೂ **ಒಂದು** ವಾಕ್ಯದಲ್ಲಿ ಉತ್ತರಿಸಿರಿ. **(1×2=2)**

1) ಶಾಕ್ಯರಾಜ್ಯದಲ್ಲಿನ ಮುಖ್ಯ ಪಟ್ಟಣದ ಹೆಸರೇನು ?
2) ಶಾಕ್ಯ ಮತ್ತು ಕೋಳಿಯರ ನಡುವೆ ಯುದ್ಧಕ್ಕೆ ಕಾರಣವೇನು ?

## ಭಾಗ – 3 (ಗದ್ಯ)

IV. ಅ) ಕೆಳಗಿನ ಪ್ರಶ್ನೆಗಳಲ್ಲಿ **ಒಂದಕ್ಕೆ** ಉತ್ತರಿಸಿರಿ. **(1×8=8)**

1) ಕರ್ನಾಟಕವನ್ನು ಹೊಳೆಗಳ ಮೂಲಕ ರಹಮತ್ ತರೀಕೆರೆ ಅವರು ಹೇಗೆ ಪರಿಚಯಿಸುತ್ತಾರೆ ?

2) ತಾಳಮದ್ದಳೆ ಕಲೆಯ ಅನನ್ಯತೆಯನ್ನು ವಿವರಿಸಿರಿ.

ಆ) **ಒಂದಕ್ಕೆ** ಸಂಕ್ಷಿಪ್ತವಾಗಿ ಉತ್ತರಿಸಿರಿ. **(1×5=5)**

1) ದೊಡ್ಡೇಗೌಡರ ವ್ಯಕ್ತಿತ್ವವನ್ನು ಪರಿಚಯಿಸಿರಿ.

2) ತಲೆಮಾರಿನ ಅಂತರವನ್ನು ಪ. ರಾಮಕೃಷ್ಣ ಶಾಸ್ತ್ರಿ ಹೇಗೆ ವಿವರಿಸಿದ್ದಾರೆ ?

ಇ) ಕೆಳಗಿನ ಪ್ರಶ್ನೆಗಳಲ್ಲಿ ಪ್ರತಿಯೊಂದಕ್ಕೂ **ಒಂದು** ವಾಕ್ಯದಲ್ಲಿ ಉತ್ತರಿಸಿರಿ. **(1×2=2)**

1) ಇಂದಿನ ಡ್ಯಾಂಗಳನ್ನು ಹಿಂದಿನವರು ಏನೆಂದು ಕರೆಯುತ್ತಿದ್ದರು ?

2) ಬೀಚಿ ಅವರ ಪೂರ್ಣ ಹೆಸರೇನು ?

## ಭಾಗ – 4 (ಕ್ರಿಯಾತ್ಮಕ ಕನ್ನಡ)

V. ಅ) **ಒಂದು** ಪ್ರಶ್ನೆಗೆ ಉತ್ತರಿಸಿರಿ. **(1×8=8)**

1) ಸಮಾನಾರ್ಥಕ–ಸಮೀಪಾರ್ಥಕ ಕುರಿತಾದ ಚರ್ಚೆಯನ್ನು ಸೋದಾಹರಣವಾಗಿ ಚರ್ಚಿಸಿರಿ.

2) ಸಾಮಾನ್ಯ ಶಬ್ದಕೋಶವೆಂದರೇನು ? ವಿವಿಧ ರೀತಿಯ ಶಬ್ದಕೋಶಗಳನ್ನು ಹೆಸರಿಸಿರಿ.

ಆ) **ಒಂದಕ್ಕೆ** ಸಂಕ್ಷಿಪ್ತವಾಗಿ ಉತ್ತರಿಸಿರಿ. **(1×5=5)**

1) ಅರ್ಥವೆಂದರೇನು ?

2) ನಾನಾರ್ಥ ಪದಕೋಶವೆಂದರೇನು ? ವಿವರಿಸಿರಿ.

ಇ) ಕೆಳಗಿನ ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿ. **(1×2=2)**

1) ಕನ್ನಡದ ಬೃಹತ್ 'ಪದನಿಧಿ' ಕೋಶವನ್ನು ರಚಿಸಿದವರು ಯಾರು ?

2) 'ಪ್ರೇಮ' ಶಬ್ದಕ್ಕೆ ಎರಡು ಸಮಾನಾರ್ಥಕಗಳನ್ನು ಬರೆಯಿರಿ.